ಕರ್ನಾಟಕ ಸಾಹಿತ್ಯ ಅಕಾಡೆಮಿ

ಸುವರ್ಣ ಸಂಭ್ರಮ

# ಕ್ರಿಯಾ ಯೋಜನೆ 2014-15

**ದಿನಾಂಕ: 12-09-2014ರ ಸರ್ವಸದಸ್ಯರ ಸಭೆಯಲ್ಲಿ ಪರಿಷ್ಕೃತಗೊಳಿಸಿದ**
**ಕ್ರಿಯಾ ಯೋಜನೆ ಅನುದಾನ : ರೂ. 1,00,00,000-00**

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-560002
(22211730/ 22106460)
www.karnatakasahithyaacademy.0rg
Email: sahithya.academy@gmail.com

# 2014–15ನೇ ಸಾಲಿಗೆ ಶೀರ್ಷಿಕೆವಾರು ನಿರೀಕ್ಷಿತ ಹಣಕಾಸು ಲಭ್ಯತೆಯ ವಿವರ

***ಯೋಜನೆ ಶೀರ್ಷಿಕೆಯ ಅನುದಾನ:***

**2013–14 ನೇ ಸಾಲಿನ ಉಳಿಕೆ ಮೊತ್ತ ರೂ. 1,56,04,931–48**
**(ಮುಂದುವರಿದ ಯೋಜನೆಗಳ ಮೊತ್ತ ರೂ. – 1,22,71,931–00** ರೂ. 33,33,000–00

| | | |
|---|---|---|
| 1) 2014–15ನೇ ಸಾಲಿಗೆ ಯೋಜನೆ ಅನುದಾನ (ನಿರೀಕ್ಷಿತ)<br>(ಪ್ರಕಟಣೆಯಲ್ಲಿ ಅನುದಾನ ಮುಗಿದ ನಂತರ ಪುಸ್ತಕ ಮಾರಾಟ ಖಾತೆಯಿಂದ ಭರಿಸಲಾಗುವುದು) | ರೂ. | 1,00,00,000–00 |
| 2) 2014–15ನೇ ಸಾಲಿಗೆ ವಿಶೇಷ ಘಟಕ ಯೋಜನೆಯಡಿ ಪರಿಶಿಷ್ಟ ಜಾತಿ | ರೂ. | 8,00,000–00 |
| 3) 2014–15ನೇ ಸಾಲಿಗೆ ಗಿರಿಜನ ಉಪಯೋಜನೆಯಡಿ ಪರಿಶಿಷ್ಟ ಪಂಗಡ | ರೂ. | 4,00,000–00 |
| 4) ಅಕಾಡೆಮಿಯಲ್ಲಿರುವ 7 ದತ್ತಿನಿಧಿಗಳ ಬಡ್ಡಿಯ ಅಂದಾಜು ಮೊತ್ತ | ರೂ. | 50,000–00 |
| | **ಒಟ್ಟು** | **ರೂ.1,45,83,000–00** |

***ಯೋಜನೇತರ ಶೀರ್ಷಿಕೆಯ ಅನುದಾನ:***

| | | |
|---|---|---|
| 1)2014–15ನೇ ಸಾಲಿಗೆ ಯೋಜನೇತರ ಅನುದಾನ (ನಿರೀಕ್ಷಿತ) | ರೂ. | 6,00,000–00 |
| 2)ವಿವಿಧ ಮೂಲಗಳಿಂದ (ನಿರೀಕ್ಷಿತ ಅಂದಾಜು ಮೊತ್ತ)<br>(ಬ್ಯಾಂಕ್ ಖಾತೆಯ ಬಡ್ಡಿ, ಫ್ರಾಂಕಿಂಗ್ ಮೆಷಿನ್ ರಿಯಾಯಿತಿ ಹಾಗೂ ಇತರೆ ಉಳಿಕೆ ಮೊತ್ತ) | ರೂ. | 2,00,000–00 |
| | **ಒಟ್ಟು ರೂ.** | **8,00,000–00** |

# ಕರ್ನಾಟಕ ಸಾಹಿತ್ಯ ಅಕಾಡೆಮಿ

## 2014–15ನೇ ಸಾಲಿಗೆ ರೂಪಿಸಿರುವ ಅಂದಾಜು ಕ್ರಿಯಾ ಯೋಜನೆ ರೂ. 1,45,83,000–00

| ಕ್ರ.ಸಂ. | ಯೋಜನೆ ಶೀರ್ಷಿಕೆ | ನಿಗದಿಪಡಿಸಿದ ಅಂದಾಜು ಮೊತ್ತ | ಕಾರ್ಯಕ್ರಮದ ಸ್ವರೂಪ |
|---|---|---|---|
| (1) | 2014ನೇ ಸಾಲಿನ ಗೌರವ ಪ್ರಶಸ್ತಿ ಹಾಗೂ 2013ನೇ ಸಾಲಿನ ಪುಸ್ತಕ ಬಹುಮಾನ<br><br>7 ದತ್ತಿನಿಧಿಗಳಿಂದ ಬಂದ ಬಡ್ಡಿ ಮೊತ್ತ | ರೂ. 24,50,000–00<br><br>ರೂ.50,000–00 | ಸಾಹಿತ್ಯ ಕ್ಷೇತ್ರದಲ್ಲಿ ಅಪೂರ್ವ ಸೇವೆ ಸಲ್ಲಿಸಿದ ಐದು ಜನ ಗಣ್ಯ ಸಾಹಿತಿಗಳಿಗೆ ನಗದು ಬಹುಮಾನದೊಂದಿಗೆ ಕಂಚಿನ ಪ್ರತಿಮೆ, ಪ್ರಶಸ್ತಿ ಪತ್ರ, ಶಾಲು, ಹಾರ, ಫಲತಾಂಬೂಲ ನೀಡಿ ಗೌರವಿಸಲಾಗುವುದು. ಊಟ, ವಸತಿ ವ್ಯವಸ್ಥೆಯೊಂದಿಗೆ ಪ್ರಯಾಣಭತ್ಯೆ ನೀಡಲಾಗುವುದು. ಕನ್ನಡ ಸಾಹಿತ್ಯದ 18 ಪ್ರಕಾರಗಳ ಅತ್ಯುತ್ತಮ ಕೃತಿಗಳಿಗೆ ನಗದು ಬಹುಮಾನದೊಂದಿಗೆ, ಪ್ರಶಸ್ತಿ ಫಲಕ, ಶಾಲು, ಹಾರ, ಫಲತಾಂಬೂಲ ನೀಡಿ ಪುರಸ್ಕರಿಸಲಾಗುವುದು. ಬಹುಮಾನಿತರಿಗೆ ವಸತಿ ವ್ಯವಸ್ಥೆಯೊಂದಿಗೆ ಪ್ರಯಾಣಭತ್ಯೆ ನೀಡಲಾಗುವುದು. ಈ ಸಮಾರಂಭವನ್ನು ಸಮಿತಿಯು ನಿರ್ಧರಿಸಿದ ಸ್ಥಳದಲ್ಲಿ ನಡೆಸಲಾಗುವುದು. |
| (2) | ಅಕಾಡೆಮಿ ನಡೆಸುವ ವಿಚಾರ ಸಂಕಿರಣಗಳು ಕವಿಗೋಷ್ಠಿ, ಕಮ್ಮಟ/ಶಿಬಿರಗಳು / ವಿಶೇಷ ಕಾರ್ಯಕ್ರಮಗಳು / ಯುವ ವೇದಿಕೆ ಕಾರ್ಯಕ್ರಮಗಳು/ ಮಕ್ಕಳ ಕಾರ್ಯಕ್ರಮ "ಸಾಧಕಿಯರೊಂದಿಗೆ ಸಂವಾದ" ಕಾರ್ಯಕ್ರಮಗಳು<br>ವಿಭಾಗಮಟ್ಟದ (4 ವಿಭಾಗಗಳಲ್ಲಿ) ಯುವಕವಿಗೋಷ್ಠಿ ./ ಸಮಾವೇಶ<br>ರೂ. 20,00,000–00 | ರೂ. 35,00,000–00 | ಸಾಹಿತ್ಯದ ವಿಷಯಗಳಿಗೆ ಸಂಬಂಧಿಸಿದಂತೆ ವಿಚಾರಗೋಷ್ಠಿ, ಸಂವಾದಗೋಷ್ಠಿ ಹಾಗೂ ಚರ್ಚೆಗಳನ್ನು ನಡೆಸುವುದು ಮತ್ತು ಇದರಲ್ಲಿ ಮಂಡಿತವಾದ ವಿಚಾರಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲಾಗುವುದು. ರಾಜ್ಯಮಟ್ಟದಲ್ಲಿ ಕಮ್ಮಟ/ಶಿಬಿರಗಳನ್ನು ನಡೆಸಲಾಗುವುದು. ಪ್ರತಿ ಶಿಬಿರಕ್ಕೂ ಆಯಾ ಪ್ರಕಾರದ 30 ಜನ ಯುವ ಲೇಖಕ/ಲೇಖಕಿಯರನ್ನು ಒಳಗೊಂಡಿದ್ದು, 5 ದಿನಗಳ ಕಾಲ ನಡೆಸಲಾಗುವುದು. ವಿಶೇಷ ಸಂದರ್ಭದಲ್ಲಿ ಕಾರ್ಯಕ್ರಮಗಳನ್ನು ರೂಪಿಸುವುದು<br>ಪ್ರತಿ ತಿಂಗಳ ಕೊನೆಯ ದಿನದಂದು ಒಬ್ಬ ಮಹಿಳಾ ಸಾಧಕಿಯೊಂದಿಗೆ ಸಂವಾದ, ಪ್ರತಿ ತಿಂಗಳಲ್ಲಿ ಯುವ ವೇದಿಕೆ ಮತ್ತು ಮಕ್ಕಳ ಕಾರ್ಯಕ್ರಮಗಳನ್ನು ನಡೆಸಲಾಗುವುದು. |

| | | | |
|---|---|---|---|
| (3) | ಹಿರಿಯ ಸಾಹಿತಿಗಳ ಜನ್ಮಶತಮಾನೋತ್ಸವ<br>1) ಅಶ್ವತ್ಥ 2) ಜಿ. ವೆಂಕಟಸುಬ್ಬಯ್ಯ<br>3) ಗೌರೀಶ ಕಾಯ್ಕಿಣಿ 4)ವಿ.ಎಂ. ಇನಾಂದಾರ್<br>5) ಬೆಳಗೆರೆ ಜಾನಕಮ್ಮ 6) ಪೇಜಾವರ ಸದಾಶಿವರಾಯ 7) ಬೀಚಿ 8) ಎಚ್.ವಿ. ಸಾವಿತ್ರಮ್ಮ 9) ಹೆಚ್.ಎಂ.ದೇವೀರಪ್ಪ<br>10) ಸರಸ್ವತಿ ಬಾಯಿ ರಾಜವಾಡೆ (ಗಿರಿಬಾಲೆ)<br>11) ದೊಡ್ಡೇರಿ ವೆಂಕಟಗಿರಿರಾವ್<br>12) ಹೆಚ್.ಎಂ.ಶಂಕರನಾರಾಯಣರಾಯರು<br>13) ಎಸ್.ವಿ. ಪರಮೇಶ್ವರಭಟ್ಟ<br>14) ಕೆ.ಎಸ್. ನರಸಿಂಹಸ್ವಾಮಿ<br>15) ಎಚ್.ಎಲ್. ನಾಗೇಗೌಡ<br>16) ಭಾರತೀಸುತ 17) ಕಯ್ಯಾರ ಕಿಞ್ಞಣ್ಣರೈ | ರೂ. 10,00,000-00 | ಹಿರಿಯ ಸಾಹಿತಿಗಳ ಜನ್ಮಶತಮಾನೋತ್ಸವ ವರ್ಷದ ಅಂಗವಾಗಿ ಅವರ ಸಾಹಿತ್ಯಕ ಸಾಧನೆಯನ್ನು ಕುರಿತು ವಿಚಾರ ಸಂಕಿರಣ, ಸಂವಾದ ಕಾರ್ಯಕ್ರಮಗಳನ್ನು ನಡೆಸಲಾಗುವುದು. ಈ ಕಾರ್ಯಕ್ರಮಗಳನ್ನು ಅವರವರ ಜನ್ಮಸ್ಥಳಗಳಲ್ಲಿ ಹಾಗೂ ಇತರೆಡೆಯಲ್ಲಿ ನಡೆಸಲಾಗುವುದು. ಈ ಕಾರ್ಯಕ್ರಮಗಳಿಗೆ ತಗಲುವ ಆಹ್ವಾನ ಪತ್ರಿಕೆ ವೆಚ್ಚ, ಭಾಗವಹಿಸುವ ವಿದ್ವಾಂಸರ ಸಂಭಾವನೆ ಮತ್ತು ಪ್ರಯಾಣವೆಚ್ಚವನ್ನು ಹಾಗೂ ಇತರೆ ವೆಚ್ಚಗಳನ್ನು ಈ ಶೀರ್ಷಿಕೆಯಿಂದ ಭರಿಸಲಾಗುವುದು. |
| (4) | ಹೊರನಾಡಿನಲ್ಲಿ ಕನ್ನಡ ಸಂಘ-ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಕವಿಗೋಷ್ಠಿ/ವಿಚಾರ ಸಂಕಿರಣ/ಸಂವಾದ ಕಾರ್ಯಕ್ರಮ | ರೂ. 5,00,000-00 | ಹೊರನಾಡಿನಲ್ಲಿರುವ ಸಂಘ-ಸಂಸ್ಥೆಗಳ ಸಹಯೋಗದಲ್ಲಿ ಅಲ್ಲಿನ ಕನ್ನಡ ಲೇಖಕರನ್ನೂ ಒಳಗೊಂಡಂತೆ ಕನ್ನಡದೊಂದಿಗಿನ ಇತರ ಭಾಷೆಗಳ ಬಾಂಧವ್ಯ, ಕನ್ನಡಿಗರ ಸಮಸ್ಯೆಗಳನ್ನು ಕುರಿತು ವಿಚಾರ ಸಂಕಿರಣಗಳನ್ನು ನಡೆಸುವುದಲ್ಲದೆ ಹೊರನಾಡಿನಲ್ಲೂ ಕನ್ನಡ ಕಾವ್ಯಗೋಷ್ಠಿ, ಸಂವಾದಗೋಷ್ಠಿಗಳನ್ನು ನಡೆಸಲಾಗುವುದು. |
| (5) | ಸಂಘ-ಸಂಸ್ಥೆಗಳಿಗೆ ಸಾಹಿತ್ಯದ ವಿಷಯವನ್ನೊಳಗೊಂಡಂತೆ ನಡೆಸುವ ವಿಚಾರ ಸಂಕಿರಣ, ಕವಿಗೋಷ್ಠಿ / ಸಂವಾದ ಕಾರ್ಯಕ್ರಮಗಳಿಗೆ ನೀಡುವ ಧನಸಹಾಯ | ರೂ. 10,00,000-00 | ವಿವಿಧ ಸಂಘ ಸಂಸ್ಥೆಗಳು ನಡೆಸುವ ಸಾಹಿತ್ಯಕ ಕಾರ್ಯಕ್ರಮಗಳಿಗೆ ಧನಸಹಾಯ ನೀಡಲಾಗುವುದು. (ರೂ. 10,000-00 ದಿಂದ 15,000-00ಗಳಿಗೆ ಮಿತಿಗೊಳಪಟ್ಟಂತೆ) |
| (6) | ಸರ್ವಸದಸ್ಯರ ಸಭೆ/ ಸ್ಥಾಯೀ ಸಮಿತಿ ಸಭೆ ಮತ್ತು ಎಲ್ಲ ಉಪಸಮಿತಿ ಸಭೆಗಳು | ರೂ. 7,50,000-00 | ಇಡೀ ವರ್ಷದಲ್ಲಿ ಪ್ರತಿ ತಿಂಗಳು ನಡೆಯುವ ಸ್ಥಾಯಿ ಸಮಿತಿ ಸಭೆ ಹಾಗೂ 3 ತಿಂಗಳಿಗೊಮ್ಮೆ ನಡೆಯುವ ಸರ್ವಸದಸ್ಯರ ಸಭೆಗಳು, ಉಪಸಮಿತಿ ಸಭೆಗಳು ಹಾಗೂ ವಿಶೇಷ ಸಭೆಗಳಲ್ಲಿ ಭಾಗವಹಿಸುವ ಸದಸ್ಯರ ಸಭಾಭತ್ಯೆ, ಪ್ರಯಾಣಭತ್ಯೆ ಹಾಗೂ ಕಾಫಿ, ತಿಂಡಿ, ಊಟ - ಎಲ್ಲ ವ್ಯವಸ್ಥೆಗಳನ್ನು ಈ ಶೀರ್ಷಿಕೆಯಿಂದ ಭರಿಸಲಾಗುವುದು. |

| | | | |
|---|---|---|---|
| (7) | ಅಧ್ಯಕ್ಷರ ಸಂಭಾವನೆ, ಮೊಬೈಲ್ ದೂರವಾಣಿ ವೆಚ್ಚ, ಸ್ಥಳೀಯ ಕಾರಿನ ಬಾಡಿಗೆ ವೆಚ್ಚ, ಹಾಗೂ ರಾಜ್ಯದ ಇತರೆಡೆ ಪ್ರವಾಸದ ಪ್ರಯಾಣ ಭತ್ಯೆ ಹಾಗೂ ಇತರೆ ವೆಚ್ಚ, ಅಧ್ಯಕ್ಷರನ್ನು ಭೇಟಿ ಮಾಡಲು ಬಂದ ಗಣ್ಯ ವ್ಯಕ್ತಿಗಳಿಗೆ ಟೀ/ಕಾಫಿ ವೆಚ್ಚ. ಹಾಗೂ ಅಧ್ಯಕ್ಷರ ಕೊಠಡಿಗೆ ಪುಸ್ತಕದ ರ್‍ಯಾಕ್ ಮತ್ತು ಪುಸ್ತಕಗಳನ್ನು ಖರೀದಿಸುವ ವೆಚ್ಚ ಅಧ್ಯಕ್ಷರು ಭೇಟಿ ಮಾಡಲು ಹೋಗುವ ಹಿರಿಯ ಸಾಹಿತಿ/ಗಣ್ಯವ್ಯಕ್ತಿಗೆ ಫಲತಾಂಬೂಲ, ಬೊಕೆ ಖರೀದಿಸಲು | ರೂ.8,00,000–00 | ಅಕಾಡೆಮಿಯ ಅಧ್ಯಕ್ಷರು ಅಕಾಡೆಮಿಯ ಕೆಲಸ/ ಕಾರ್ಯಕ್ರಮಗಳ ನಿಮಿತ್ತ ಬೆಂಗಳೂರಿಗೆ ಬಂದುಹೋಗುವ ಪ್ರಯಾಣಭತ್ಯೆ/ದಿನಭತ್ಯೆ ಹಾಗೂ ಅಕಾಡೆಮಿಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಎಲ್ಲ ಪ್ರವಾಸಗಳಿಗೆ ಪ್ರಯಾಣಭತ್ಯೆ ಹಾಗೂ ಪ್ರತೀ ತಿಂಗಳ ಗೌರವ ಸಂಭಾವನೆ ಮತ್ತು ಸ್ಥಳೀಯ ಕಾರಿನ ಬಾಡಿಗೆ ವೆಚ್ಚ ಹಾಗೂ ಮೊಬೈಲ್ ದೂರವಾಣಿ ವೆಚ್ಚವನ್ನು ಈ ಶೀರ್ಷಿಕೆಯಿಂದ ಭರಿಸಲಾಗುವುದು. ಅಧ್ಯಕ್ಷರನ್ನು ಭೇಟಿ ಮಾಡಲು ಬಂದ ಗಣ್ಯ ವ್ಯಕ್ತಿಗಳಿಗೆ ಟೀ/ಕಾಫಿ ವೆಚ್ಚ, ಇದಲ್ಲದೆ ಅಧ್ಯಕ್ಷರ ಸೂಚನೆ ಮೇರೆಗೆ ಅಧ್ಯಕ್ಷರ ಕೊಠಡಿಗೆ ಎಲ್ಲ ಸಾಹಿತಿಗಳ ಸಮಗ್ರ ಸಾಹಿತ್ಯ ಸಂಪುಟಗಳು ಹಾಗೂ ಮುಖ್ಯವಾದ ಪುಸ್ತಕಗಳನ್ನು ಖರೀದಿಸಲು ತಗಲುವ ವೆಚ್ಚ ಮತ್ತು ಪುಸ್ತಕಗಳನ್ನು ಜೋಡಿಸಿಡಲು ರ್‍ಯಾಕ್ ನ ಅವಶ್ಯಕತೆ ಇರುವುದರಿಂದ ಇದಕ್ಕೆ ತಗಲುವ ವೆಚ್ಚವನ್ನು ಈ ಶೀರ್ಷಿಕೆಯಿಂದ ಭರಿಸಲಾಗುವುದು. |
| (8) | ಅಧ್ಯಕ್ಷರ ಜರೂರು ಸ್ವರೂಪದ ವೆಚ್ಚ ಸಾಹಿತ್ಯ ಚಟುವಟಿಕೆಗಳಿಗೆ ಅಧ್ಯಕ್ಷರ ಸ್ವಂತ ವಿವೇಚನೆ ನಿಧಿಯಿಂದ ಧನಸಹಾಯ | ರೂ.20,000–00 | ಯಾವುದೇ ಸಂಘ ಸಂಸ್ಥೆಗಳು ನಡೆಸುವ ಸಾಹಿತ್ಯಕ ಕಾರ್ಯಕ್ರಮಗಳಿಗೆ ಪ್ರತಿ ಕಾರ್ಯಕ್ರಮಕ್ಕೆ ಗರಿಷ್ಠ ರೂ. 5,000–00ಗಳ ಮಿತಿಗೊಳಪಟ್ಟು ಮಾನ್ಯ ಅಧ್ಯಕ್ಷರು ತಮ್ಮ ವಿವೇಚನೆ ಅನುಸಾರ ಈ ವೆಚ್ಚವನ್ನು ಭರಿಸಲಾಗುವುದು. |
| (9) | ಲೇಖಕರಿಗೆ ಪ್ರವಾಸ ಅನುದಾನ | ರೂ.2,00,000–00 | ಪತ್ರಿಕಾ ಪ್ರಕಟಣೆ ನೀಡಿ, ಬಂದ ಅರ್ಜಿಗಳನ್ನು ಪರಿಶೀಲಿಸಿ, ಅದರಲ್ಲಿ 5 ಜನ ಲೇಖಕರನ್ನು ಆಯ್ಕೆ ಮಾಡಿ ಅವರು ಹೋಗಬೇಕಾದ ಹೊರ ರಾಜ್ಯಗಳ ಪ್ರವಾಸ ಮಾಡಿ ಅಲ್ಲಿನ ಸಂಘ ಸಂಸ್ಥೆಗಳಿಗೆ ಭೇಟಿ ನೀಡಿ ಅಲ್ಲಿನ ಸಾಹಿತ್ಯ –ಸಂಸ್ಕೃತಿ ಇವುಗಳನ್ನು ಕುರಿತು ಪರಿಚಯ ಪುಸ್ತಿಕೆ ಬರೆದುಕೊಡುವುದು. ಅವರು ಹೋಗುವ ಹೊರ ರಾಜ್ಯಗಳ ಅಂತರದ ಮೇಲೆ ಅವರಿಗೆ ಪ್ರವಾಸ ಅನುದಾನವನ್ನು ನಿಗದಿಗೊಳಿಸಲಾಗುವುದು. |
| (10) | 5 ಜನ ಲೇಖಕರಿಗೆ ಫೆಲೊಶಿಪ್ | ರೂ. 5,00,000–00 | ಪತ್ರಿಕಾ ಪ್ರಕಟಣೆ ನೀಡಿ, ಬಂದ ಅರ್ಜಿಗಳನ್ನು ಪರಿಶೀಲಿಸಿ, ಅದರಲ್ಲಿ 5 ಜನ ಲೇಖಕರನ್ನು ಆಯ್ಕೆ ಮಾಡಿ ಅವರು ಕ್ಷೇತ್ರಕಾರ್ಯ ಮಾಡಬೇಕಾದ ವಿಷಯಗಳನ್ನು ಅಕಾಡೆಮಿಯೇ ನೀಡುತ್ತದೆ. ಆ ಕುರಿತು ಅವರು ಸಾರಲೇಖವನ್ನು ಸಿದ್ಧಪಡಿಸಿ ಅಕಾಡೆಮಿಗೆ ತೋರಿಸಿ ಅವರ ಒಪ್ಪಿಗೆ ಪಡೆದು ಕ್ಷೇತ್ರಕಾರ್ಯವನ್ನು ಕೈಗೊಂಡು ಸ್ಥೂಲ ಅಧ್ಯಯನದ ಹಸ್ತಪ್ರತಿಯನ್ನು ಅಕಾಡೆಮಿ ನೀಡಿದ ನಂತರ ಅದರ ಪರಿಶೀಲಕರಿಂದ ಪರಿಶೀಲಿಸಿದ ನಂತರ ಅಂತಿಮ ಡಿ.ಟಿ.ಪಿ. ಪ್ರತಿಯನ್ನು ಹಾಗೂ ಅಡಕ (ಸಿ.ಡಿ.) ಮುದ್ರಿಕೆಯನ್ನು ನೀಡಬೇಕು. ಇವರಿಗೆ ತಲಾ 1.00 ಲಕ್ಷ ರೂ.ಗಳಂತೆ ಅನುದಾನವನ್ನು 3 ಕಂತಿನಲ್ಲಿ ಬಿಡುಗಡೆ ಮಾಡಲಾಗುವುದು. |

| | | | |
|---|---|---|---|
| (11) | ಅಧಿಕಾರಿ ಹಾಗೂ ಸಿಬ್ಬಂದಿಗಳ ಪ್ರವಾಸದ ಪ್ರಯಾಣಭತ್ಯೆ ಮತ್ತು ದಿನಭತ್ಯೆ ಹಾಗೂ ಸಿಬ್ಬಂದಿ ವೇತನದ ಕೊರತೆ ವೆಚ್ಚ | ರೂ.4,13,000–00 | ಅಕಾಡೆಮಿಯು ಇಡೀ ವರ್ಷ ರಾಜ್ಯಾದ್ಯಂತ ನಡೆಸುವ ಕಾರ್ಯಕ್ರಮಗಳಲ್ಲಿ ಅಧಿಕಾರಿ ಹಾಗೂ ಸಿಬ್ಬಂದಿಯವರು ಭಾಗವಹಿಸಿದಾಗ ಪ್ರಯಾಣಭತ್ಯೆ ಮತ್ತು ದಿನಭತ್ಯೆಗಳನ್ನು ಪಾವತಿಸಲಾಗುವುದು. ಹಾಗೂ ಯೋಜನೇತರ ಶೀರ್ಷಿಕೆಯಲ್ಲಿ ಸಿಬ್ಬಂದಿ ವೇತನಕ್ಕೆ ಇಟ್ಟಿರುವ ಮೊತ್ತ ಮುಗಿದ ನಂತರ ಈ ಶೀರ್ಷಿಕೆಯಿಂದ ಭರಿಸಲಾಗುವುದು. |
| (12) | ಅಂಚೆ ವೆಚ್ಚ | ರೂ.1,00,000–00 | ಇಡೀ ವರ್ಷದ ಅಕಾಡೆಮಿಯ ಎಲ್ಲ ಪತ್ರವ್ಯವಹಾರಗಳ ರಿಜಿಸ್ಟರ್ಡ್ ಪಾರ್ಸಲ್, ರಿಜಿಸ್ಟರ್ಡ್ ಪೋಸ್ಟ್, ಸ್ಪೀಡ್ ಪೋಸ್ಟ್ ಅಂಚೆ ವೆಚ್ಚಗಳಿಗೆ ಬಳಸಲಾಗುವುದು. |
| (13) | ಕಂಪ್ಯೂಟರ್, ಜೆರಾಕ್ಸ್ ಯಂತ್ರ, ಫ್ರಾಂಕಿಂಗ್ ಯಂತ್ರ, ಇವುಗಳ ವಾರ್ಷಿಕ ನಿರ್ವಹಣೆ ಮತ್ತು ದುರಸ್ತಿ ವೆಚ್ಚ | ರೂ.1,00,000–00 | ಅಂತರಜಾಲ ವ್ಯವಸ್ಥೆ ಮತ್ತು ಕಂಪ್ಯೂಟರ್‌ನಲ್ಲಿ ಅಳವಡಿಸಬೇಕಾದ ತಂತ್ರಾಂಶಗಳು ಹಾಗೂ ವಾರ್ಷಿಕ ನಿರ್ವಹಣೆ, ಅಕಾಡೆಮಿಯ ದೈನಂದಿನ ಬಳಕೆಗೆ ಕಪ್ಪು ಮತ್ತು ಕಲರ್ ಇಂಕ್ ಕಾಟ್ರಿಡ್ಜ್ ಹಾಗೂ ನಿರ್ವಹಣೆ ವೆಚ್ಚ ಮತ್ತು ಜೆರಾಕ್ಸ್ ಯಂತ್ರಗಳ ಇಡೀ ವರ್ಷದ ನಿರ್ವಹಣೆಯನ್ನು ವಹಿಸಲು ಮತ್ತು ದುರಸ್ತಿ ವೆಚ್ಚಗಳನ್ನು ಭರಿಸಲಾಗುವುದು. |
| (14) | ಅಕಾಡೆಮಿ ದೂರವಾಣಿ ವೆಚ್ಚ ಮತ್ತು ನಿರ್ವಹಣೆ | ರೂ.1,00,000–00 | ಅಕಾಡೆಮಿಯ ದೈನಂದಿನ ಕೆಲಸಗಳಿಗೆ ಬಳಸಿಕೊಳ್ಳುವ ದೂರವಾಣಿ ವೆಚ್ಚ ಹಾಗೂ ಅಕಾಡೆಮಿಯ ಕೆಲಸಗಳಿಗೆ ಅಧ್ಯಕ್ಷರು ದೂರವಾಣಿ ಬಳಸಿದ ವೆಚ್ಚವನ್ನು ಪಾವತಿಸಲಾಗುವುದು. |
| (15) | ಸಮಗ್ರ ಸಾಹಿತ್ಯ ಅಂತರಜಾಲ ತಾಣದ ಪರಿಷ್ಕರಣೆ ಮತ್ತು ನಿರ್ವಹಣೆ ವೆಚ್ಚ | ರೂ.2,00,000–00 | ಕರ್ನಾಟಕ ಸಾಹಿತ್ಯ ಅಕಾಡೆಮಿ ಸ್ಥಾಪಿಸಿರುವ ಜಾಲ ತಾಣದಲ್ಲಿ ಸಮಗ್ರ ಕನ್ನಡ ಸಾಹಿತ್ಯವನ್ನು ಅಂತರಜಾಲ ತಾಣಕ್ಕೆ ಅಳವಡಿಸಿ ವಿಶ್ವವ್ಯಾಪಿಯಾಗಿ ಕನ್ನಡ ಓದುಗರಿಗೆ ಕನ್ನಡ ಸಾಹಿತ್ಯ ದೊರಕುವಂತೆ ಮಾಡುವುದು. ಮತ್ತು ಇದರ ನಿರ್ವಹಣೆ ಮತ್ತು ಪರಿಷ್ಕರಣೆಗಾಗಿ ತಗಲುವ ವೆಚ್ಚಗಳು. |
| (16) | ಪ್ರಕಟಣೆಗಳು:<br>ಅನುದಾನದ ಖಾತೆ :<br>ವಿಚಾರ ಸಂಕಿರಣ ಮಾಲೆ –<br>ವಾರ್ಷಿಕ ಸಂಕಲನಗಳು –<br>ಅನಿಕೇತನ ತ್ರೈಮಾಸಿಕ ಪತ್ರಿಕೆ<br>ಕನ್ನಡ ಆವೃತ್ತಿ (4) ಸಂಚಿಕೆಗಳು<br>ಆಂಗ್ಲ ಆವೃತ್ತಿ (4) ಸಂಚಿಕೆಗಳು | ರೂ.15,00,000–00 | – ವಿಚಾರ ಸಂಕಿರಣಗಳಲ್ಲಿ ಮಂಡಿತವಾದ ಲೇಖನಗಳನ್ನು ಸಂಕಲಿಸಿ ಮುದ್ರಿಸುವುದು.<br>– ವಾರ್ಷಿಕ ಸಂಕಲನಗಳ ಪ್ರಕಟಣೆ<br>– ಅಕಾಡೆಮಿಯ ತ್ರೈಮಾಸಿಕ ಪತ್ರಿಕೆಯಾದ ಕನ್ನಡ ಹಾಗೂ ಇಂಗ್ಲಿಷ್ ಅನಿಕೇತನಗಳು ಸಮಕಾಲೀನ ಕನ್ನಡ ಸಾಹಿತ್ಯವನ್ನು ಕನ್ನಡಿಗರಿಗೆ ಮತ್ತು ಕನ್ನಡೇತರರಿಗೆ ಪರಿಚಯಿಸುವ ದೃಷ್ಟಿಯಿಂದ ಈ ಪ್ರಕಟಣೆಗಳನ್ನು ಮಾಡಲಾಗುವುದು. ಮತ್ತು ಇವುಗಳನ್ನುಅಂತರಜಾಲ ತಾಣಕ್ಕೆ ಅಳವಡಿಸಲಾಗುವುದು. ಇವೆಲ್ಲವುಗಳ ಸಂಪಾದಕರು/ಲೇಖಕರ ಗೌರವ ಸಂಭಾವನೆ , ಮುದ್ರಣ ವೆಚ್ಚ, ಕರಡು ತಿದ್ದುವ ವೆಚ್ಚ, ಹಾಗೂ ಬಳಸಿಕೊಳ್ಳುವ ಲೇಖನಗಳು /ಕವನಗಳು– ಲೇಖಕರಿಗೆ ಸಂಭಾವನೆ ಹಾಗೂ ಇತರೆ ವೆಚ್ಚಗಳಿಗೆ ಬಳಸಿಕೊಳ್ಳಲಾಗುವುದು. |

| | | | |
|---|---|---|---|
| | ವಾರ್ತಾಪತ್ರ – ದ್ವೈಮಾಸಿಕ ಪತ್ರಿಕೆ (ಅನುದಾನ ಖಾತೆಯ ಮೊತ್ತ ಮುಗಿದ ನಂತರ ಪುಸ್ತಕ ಮಾರಾಟ ಖಾತೆಯಿಂದ ಭರಿಸಲಾಗುವುದು.) | | ಕರ್ನಾಟಕ ಸಾಹಿತ್ಯ ಅಕಾಡೆಮಿಯ ಕಾರ್ಯಚಟುವಟಿಕೆಗಳನ್ನು ಪರಿಚಯಿಸುವ ದ್ವೈಮಾಸಿಕ ಪತ್ರಿಕೆಯನ್ನು ಪ್ರಕಟಿಸಲಾಗುವುದು. |
| **(17)** | ಅನಿರೀಕ್ಷಿತ ವೆಚ್ಚ | ರೂ. **2,00,000–00** | ಅನಿವಾರ್ಯ ಸಂದರ್ಭಗಳಲ್ಲಿ ನಿಯಮಾನುಸಾರ ಬಳಸಿಕೊಳ್ಳಬಹುದಾದ ವೆಚ್ಚ |
| **(18)** | **2014–15**ನೇ ಸಾಲಿಗೆ ವಿಶೇಷ ಘಟಕ ಯೋಜನೆಯಡಿ ಪರಿಶಿಷ್ಟ ಜಾತಿ ಅಭ್ಯರ್ಥಿಗಳಿಗೆ ಕಾರ್ಯಕ್ರಮ/ಶಿಬಿರ | ರೂ. **8,00,000–00** | ಕಾರ್ಯಕ್ರಮಗಳು: ಕಾವ್ಯ, ಕಥೆ, ಸಾಹಿತ್ಯ ವಿಮರ್ಶೆ, 25 ಜನರಂತೆ ತರಬೇತಿ ಶಿಬಿರಗಳು – 7 ದಿನಗಳಿಗೆ– ಇದಕ್ಕೆ ತಗಲುವ ವೆಚ್ಚಗಳನ್ನು ಈ ಶೀರ್ಷಿಕೆಯಿಂದ ಭರಿಸಲಾಗುವುದು. |
| **(19)** | **2014–15**ನೇ ಸಾಲಿಗೆ ಗಿರಿಜನ ಉಪಯೋಜನೆ ಯಡಿ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಕಾರ್ಯಕ್ರಮ/ಶಿಬಿರ | ರೂ. **4,00,000–00** | ಕಾರ್ಯಕ್ರಮಗಳು: ಕಾವ್ಯ, ಕಥೆ, ಸಾಹಿತ್ಯ ವಿಮರ್ಶೆ, 25 ಜನರಂತೆ ತರಬೇತಿ ಶಿಬಿರಗಳು – 7 ದಿನಗಳಿಗೆ –ಇದಕ್ಕೆ ತಗಲುವ ವೆಚ್ಚಗಳನ್ನು ಈ ಶೀರ್ಷಿಕೆಯಿಂದ ಭರಿಸಲಾಗುವುದು. |
| | *ಒಟ್ಟು:–* | **ರೂ.1,45,83,000–00** | |

*(ಯೋಜನೆ ಅನುದಾನ ಒಟ್ಟು : ಒಂದು ಕೋಟಿ ನಲವತ್ತೈದು ಲಕ್ಷದ ಎಂಬತ್ತಮೂರು ಸಾವಿರ ರೂಪಾಯಿಗಳು ಮಾತ್ರ)*

# 2014–15 ನೇ ಸಾಲಿಗೆ ರೂಪಿಸಿರುವ ಅಂದಾಜು ಕ್ರಿಯಾ ಯೋಜನೆ –ಯೋಜನೇತರ ಶೀರ್ಷಿಕೆಗಳು (NON-PLAN)

## ಅನುದಾನ : ರೂ. 8,00,000–00

| ಕ್ರ.ಸಂ. | *ಯೋಜನೇತರ ಶೀರ್ಷಿಕೆ* | *ನಿಗದಿಪಡಿಸಿದ ಅಂದಾಜು ಮೊತ್ತ* | *ಕಾರ್ಯಕ್ರಮದ ಸ್ವರೂಪ* |
|---|---|---|---|
| (1) | ಸಿಬ್ಬಂದಿ ವೇತನ | ರೂ. 7,00,000–00 | ಅಕಾಡೆಮಿಯಲ್ಲಿರುವ 4 ಜನ ಸಿಬ್ಬಂದಿಗಳ ಒಂದು ವರ್ಷದ ವೇತನ. |
| (2) | ಸಾದಿಲ್ವಾರು ವೆಚ್ಚ ಹಾಗೂ ಲೇಖನ ಸಾಮಗ್ರಿ ವೆಚ್ಚ ಮತ್ತು ಆದಾಯ ತೆರಿಗೆ ರಿಟರ್ನ್ಸ್ ಫೈಲ್ ಮಾಡಲು ಚಾರ್ಟರ್ಡ್ ಅಕೌಂಟೆಂಟ್‌ರವರಿಗೆ ಸಂಭಾವನೆ ನಿಗದಿ | ರೂ. 1,00,000–00 | ಇಡೀ ವರ್ಷದಲ್ಲಿ ಅಕಾಡೆಮಿಯ ದೈನಂದಿನ ಕೆಲಸಗಳಿಗೆ ಬೇಕಾಗುವ ಸಾದಿಲ್ವಾರು ಹಾಗೂ ಲೇಖನ ಸಾಮಗ್ರಿಗಳಿಗೆ ತಗಲುವ ವೆಚ್ಚಗಳನ್ನು ಭರಿಸಲಾಗುವುದು. ಹಾಗೂ ಕಚೇರಿ ಶುಚಿಗೊಳಿಸುವವರಿಗೆ ಮತ್ತು ಕುಡಿಯುವ ನೀರು, ದಿನಪತ್ರಿಕೆ ಬಾಬ್ತು, ಕೇಬಲ್ ಬಾಬ್ತು, ಕಾಫಿ. ಟೀ.– ಇವುಗಳಿಗೆ ಪಾವತಿಸಲು ಇಡೀ ವರ್ಷದಲ್ಲಿ ಭರಿಸಲಾಗುವುದು. ಕೊರತೆ ಬಿದ್ದಲ್ಲಿ ಯೋಜನೆಯ ಅನುದಾನದಿಂದ ಭರಿಸಲಾಗುವುದು. |
| | ಒಟ್ಟು | ರೂ. 8,00,000–00 | |

*(ಯೋಜನೇತರ ಒಟ್ಟು :– ಎಂಟು ಲಕ್ಷ ರೂಪಾಯಿಗಳು ಮಾತ್ರ)*

# ಮುಂದುವರಿದ ಯೋಜನೆಗಳು

| | | | |
|---|---|---|---|
| 1) | 2010ರ ಪುಸ್ತಕ ಬಹುಮಾನ ಹಾಗೂ 2011ರ ಗೌರವ ಪ್ರಶಸ್ತಿ ಪ್ರದಾನ ಸಮಾರಂಭ | ರೂ. | 15,00,000–00 |
| 2) | 2011ರ ಪುಸ್ತಕ ಬಹುಮಾನ ಹಾಗೂ 2012ರ ಗೌರವ ಪ್ರಶಸ್ತಿ ಪ್ರದಾನ ಸಮಾರಂಭ | ರೂ. | 15,00,000–00 |
| 3) | 2012 ಪುಸ್ತಕ ಬಹುಮಾನ ಹಾಗೂ 2013ರ ಗೌರವ ಪ್ರಶಸ್ತಿ ಸಮಾರಂಭ | ರೂ. | 15,00,000–00 |
| 4) | ರವೀಂದ್ರನಾಥ ಟ್ಯಾಗೂರ್ 150ನೇ ವರ್ಷಾಚರಣೆ (ಕಸನಿ 50,000–00 + ಅಕಾಡೆಮಿ 50,000–00) | ರೂ. | 1,00,000–00 |
| 5) | ಹರ್ಡೇಕರ್ ಮಂಜಪ್ಪನವರ ಉಪನ್ಯಾಸ ಮಾಲೆಯ ಜನ್ಮಶತಮಾನೋತ್ಸವ | ರೂ. | 1,00,000–00 |
| 6) | ಅಕಾಡೆಮಿಯ ಸುವರ್ಣ ಸಂಭ್ರಮ : ಕಾರ್ಯಕ್ರಮ ಮತ್ತು ಪ್ರಕಟಣೆ (ಮಾಜಿ ಅಧ್ಯಕ್ಷರುಗಳ ಸಾಕ್ಷ್ಯಚಿತ್ರ, ಬದುಕು–ಬರಹ ಕುರಿತು ಪುಸ್ತಕ ಪ್ರಕಟಣೆ, ಅಕಾಡೆಮಿ ನಡೆದು ಬಂದ ದಾರಿ ಕುರಿತು ಸಾಕ್ಷ್ಯಚಿತ್ರ ಮತ್ತು ಪುಸ್ತಕ ಪ್ರಕಟಣೆ, ಕೇಂದ್ರ ಸಾಹಿತ್ಯ ಅಕಾಡೆಮಿ ಜೊತೆಗೂಡಿ ಕಾರ್ಯಕ್ರಮ, ಪ್ರಾಚೀನ ಕವಿ–ಕಾವ್ಯ ವಾಚನ, ಕರ್ನಾಟಕ ಸಂಘ–ಸಂಸ್ಥೆಗಳ ಜೊತೆಗೂಡಿ ರಾಷ್ಟ್ರೀಯ ವಿಚಾರ ಸಂಕಿರಣ, ರಾಜ್ಯದಲ್ಲಿರುವ ಎಲ್ಲ ವಿ.ವಿ.ಗಳ ಸಹಯೋಗದೊಂದಿಗೆ ಕಾರ್ಯಕ್ರಮ ) | ರೂ. | 10,00,000–00 |
| 7) | ಮುಂದುವರಿದ ಪ್ರಕಟಣೆಗಳು (ಮುದ್ರಣ ವೆಚ್ಚ, ಲೇಖಕರ ಸಂಭಾವನೆ ಇತರೆ) | ರೂ. | 15,00,000–00 |
| 8) | ಸಾಹಿತ್ಯದಲ್ಲಿ ಬಾಲ ಹಾಗೂ ಯುವ ಜನತೆಗೆ ಸಾಂಸ್ಕೃತಿಕ ಶಿಬಿರ ನಡೆಸಲು ವಿಶೇಷ ಅನುದಾನ (2011–12 : 2012–13) | ರೂ. | 5,61,931–00 |
| 9) | ವಿಶೇಷ ಘಟಕ ಯೋಜನೆಯಡಿ ಪರಿಶಿಷ್ಟ ಜಾತಿ (2011–12 : 2012–13) ( 8 ಜನರಿಗೆ ಫೆಲೋಶಿಪ್ , ತಲಾ 1,00 ಲಕ್ಷದಂತೆ , ಅಕಾಡೆಮಿಯೇ ವಿಷಯ ನೀಡುತ್ತದೆ) ಕಾರ್ಯಕ್ರಮಗಳು: ಕಾವ್ಯ, ಕಥೆ, ಸಾಹಿತ್ಯ ವಿಮರ್ಶೆ, 25 ಜನರಂತೆ ತರಬೇತಿ ಶಿಬಿರಗಳು – 7 ದಿನಗಳಿಗೆ | ರೂ. | 28,00,000–00 |
| 10) | ಗಿರಿಜನ ಉಪಯೋಜನೆಯಡಿ ಪರಿಶಿಷ್ಟ ಪಂಗಡ (2011–12 : 2012–13) (4 ಜನರಿಗೆ ಫೆಲೋಶಿಪ್, ತಲಾ 1,00 ಲಕ್ಷದಂತೆ , ಅಕಾಡೆಮಿಯೇ ವಿಷಯ ನೀಡುತ್ತದೆ) ಕಾರ್ಯಕ್ರಮಗಳು: ಕಾವ್ಯ, ಕಥೆ, ಸಾಹಿತ್ಯ ವಿಮರ್ಶೆ, ತರಬೇತಿ ಶಿಬಿರಗಳು 25 ಜನರಂತೆ – 7 ದಿನಗಳಿಗೆ | ರೂ. | 14,00,000–00 |
| 11) | 2013–14ನೇ ಸಾಲಿನ ವಿಶೇಷ ಘಟಕ ಪರಿಶಿಷ್ಟ ಜಾತಿ ಸಾಹಿತಿಗಳ ಸಾಕ್ಷ್ಯಚಿತ್ರ ನಿರ್ಮಾಣ ಹಾಗೂ ಗಿರಿಜನ | ರೂ. | 2,20,000–00 |
| | ಉಪಯೋಜನೆಯಡಿ ಪರಿಶಿಷ್ಟ ಪಂಗಡದ ಹಿರಿಯ ಸಾಹಿತಿಗಳ ಕುರಿತು ಸಾಕ್ಷ್ಯಚಿತ್ರ ನಿರ್ಮಾಣ | ರೂ. | 90,000–00 |
| | ಒಟ್ಟು | ರೂ. | 1,22,71,931–00 |